
## ಚುಟುಕು ಸುದ್ದಿ

## ವಿದ್ಯಾರ್ಥಿಗಳೊಂದಿಗೆ ಸದ್ಗುರು ಸಂವಾದ



ಉದಯಕಾಲ ನ್ಯೂಸ್

**ಬೆಂಗಳೂರು: ನದಿಗಳ ಪುನಶ್ಚೇತನಕ್ಕಾಗಿ ದೇಶಾದ್ಯಂತ ರ‍್ಯಾಲಿ ಫಾರ್ ರಿವರ್ ಆಂದೋಲನ ನಡೆಸಿದ ಇಶಾ ಫೌಂಡೇಷನ್ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್ ಮತ್ತೊಮ್ಮೆ ಮಹತ್ವದ ಉದ್ದೇಶದಿಂದ ದೇಶ ಸಂಚಾರಕ್ಕೆ ಮುಂದಾಗಿದ್ದಾರೆ.**

ಈ ಬಾರಿ ಯುವಜನರನ್ನು ಎಚ್ಚರಿಸುವ ಹಾಗೂ ಅವರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಯುವ ಜನಾಂಗವನ್ನು ಮುಖಾಮುಖಿಯಾಗಲಿದ್ದಾರೆ. ಯುವಜನರು ತಮ್ಮಲ್ಲಿರುವ ಗೊಂದಲಗಳು ಹಾಗೂ ಸಮಸ್ಯೆಗಳ ಕುರಿತ ಒಂದು ಮಿಲಿಯನ್ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ.

ಬೆಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯುವ ಜನರೇ ಸತ್ಯವು ನಿಮ್ಮದಾಗಲಿ ಎಂಬ ಅಭಿಯಾನದಡಿ ಸೆ. 4ರಂದು ದೆಹಲಿಯಲ್ಲಿ ಅಭಿಯಾನ ಆರಂಭಿಸಿದ್ದು, ದೇಶಾದ್ಯಂತ ಸಂಚರಿಸಿ, ಸೆ.29ರಂದು ಅಹಮದಾಬಾದ್ನಲ್ಲಿ ಕೊನೆಗೊಳಿಸಲಿದ್ದಾರೆ. ಬೆಂಗಳೂರಿನಲ್ಲಿ ಸೆ. 12ರಂದು, ಮೈಸೂರಿನಲ್ಲಿ 15ರಂದು ಯುವಜನತೆಯೊಂದಿಗೆ ಸಂವಾದ ನಡೆಸಲಾಗುವುದು ಎಂದು ತಿಳಿಸಿದರು.

ಈ ಅಭಿಯಾನವು ದೇಶದ ವಿವಿದೆಡೆ ಒಂದು ತಿಂಗಳ ಕಾಲ ನಡೆಯಲಿದೆ. ಬೆಂಗಳೂರು, ಮೈಸೂರು, ಹೈದರಾಬಾದ್, ಮುಂಬೈ, ವಾರಾಣಾಸಿ, ದೆಹಲಿ, ಶಿಲ್ಲಾಂಗ್ ಮತ್ತು ಅಹಮದಾಬಾದ್ ನಗರಗಳಲ್ಲಿ ನಡೆಯಲಿದೆ.

ಸಂವಾದ ಸಂದರ್ಭದಲ್ಲಿ ಜೀವನದ ಉದ್ದೇಶ, ಜೀವನಕ್ಕೆ ಬೇಕಾಗಿರುವ ಅಗತ್ಯತೆ, ಲೀಂಗಿಕತೆ ಸೇರಿದಂತೆ ಯುವಜನಾಂಗದಲ್ಲಿರುವ ಹಲವು ಪ್ರಶ್ನೆಗಳಿಗೆ ಮುಕ್ತವಾಗಿ ಉತ್ತರ ನೀಡಲು ಪೋಷಕರು ಹಾಗೂ ಅಧ್ಯಾಪಕರುಗಳಿಂದ ಸಾಧ್ಯವಾಗುತ್ತಿಲ್ಲ. ಹೀಗಾಗಿ, ಸಣ್ಣಪುಟ್ಟ ಸವಾಲುಗಳು, ಸಮಸ್ಯೆಗಳು, ಪ್ರಶ್ನೆಗಳು ಎದುರಾದಾಗ ಅದರಿಂದ ಹೊರಬರಲಾಗದೇ ಆತ್ಮಹತ್ಯೆಗೆ ಮುಂದಾಗುತ್ತಾರೆ. ಇದರಿಂದ ಹೊರಬರಲು ಈ ಅಭಿಯಾನ ಸಹಕಾರಿಯಾಗಲಿದೆ. ಟ್ವಿಟರ್, ಫೇಸ್‌ಬುಕ್ ಜಾಲತಾಣಗಳಲ್ಲಿ ಯುವಜನತೆಯೊಂದಿಗಿನ ಸಂಪರ್ಕ ಮುಂದುವರೆಯಲಿದೆ ಎಂದರು.

ಈಗಾಗಲೇ ಸಾಕಷ್ಟು ವಿದ್ಯಾರ್ಥಿಗಳು ತಮ್ಮ ಗೊಂದಲಗಳನ್ನು ಬಗೆಹರಿಸಿಕೊಳ್ಳುತ್ತಿದ್ದಾರೆ. 83000081000 ಸಂಖ್ಯೆಗೆ ಎಸ್‌ಎಂಎಸ್ ಮಾಡುತ್ತಾರೆ. ಇನ್ಸ್ಟಾಗ್ರಾಮಿನಲ್ಲೂ ಪ್ರತಿ ಶನಿವಾರ ರಾತ್ರಿ 8ಕ್ಕೆ ನೇರ ಪ್ರಸಾರದಲ್ಲಿ ಯುವ ಜನಾಂಗದ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದಾರೆ.

ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಸೆ.12ರಂದು ಹಾಗೂ ಸೆ.16 ರಂದು ಐಐಎಂ ನಲ್ಲಿ ಸಂವಾದ ನಡೆಯಲಿದೆ. ಸದ್ಗುರು ಅಭ್ಯಾಸ ಮಾಡಿರುವ ಮೈಸೂರಿನ ಡಿಎಂಎಸ್ ಶಾಲೆಯಲ್ಲಿ ಸೆ. 15ರಂದು ಸಂಜೆ 5ಕ್ಕೆ ಸಂವಾದ ನಡೆಯಲಿದ್ದು, ಇವರಿಗೆ ಪಾಠ ಮಾಡಿದ ಇಂಗ್ಲಿಷ್ ಶಿಕ್ಷಕಿಯೊಬ್ಬರು ಸಂವಾದದಲ್ಲಿ ಪಾಲ್ಗೊಳ್ಳುತ್ತಿರುವುದು ವಿಶೇಷ.

ಇದೇ ಸಂದರ್ಭದಲ್ಲಿ ಪ್ರೆಸ್‌ಕ್ಲಬ್‌ನ ಪದಾಧಿಕಾರಿಗಳು ಸದ್ಗುರುಗಳನ್ನು ಅಭಿನಂದಿಸಿದರು.

ಉದಯಕಾಲ


ಪತ್ರಿಕೆ ಬರುತ್ತಿಲ್ಲವೇ ?
ಆತ್ಮೀಯ ಓದುಗರೇ,
ಉದಯಕಾಲ ಪತ್ರಿಕೆಯ
ಚಂದಾದಾರರಾಗಲು ಅಥವಾ
ಪತ್ರಿಕೆ ಸರಬರಾಜಿನಲ್ಲಿ
ಸಮಸ್ಯೆ ಇದ್ದಲ್ಲಿ ಕೂಡಲೇ ಸಂಪರ್ಕಿಸಿ
9449018264 / 73493 10075
96111 33371 / 99801 03727

ಉದಯಕಾಲ ದಿನಪತ್ರಿಕೆಯಲ್ಲಿ
ಜಾಹೀರಾತು ನೀಡಲು ಸಂಪರ್ಕಿಸಿ:
9449018264/9342232268
73493 10075

## ಉದಯ ಪಂಚ್

-ಅರ್ಜುನ್

ಸಿಎಂ ಅವರ ಗೌರಿ ಹಬ್ಬದ ವಿಶೇಷ ಆಚರಣೆ!



ಬನ್ನಿ ಬನ್ನಿ! ಎಲ್ಲರೂ ಒಬ್ಬಟ್ಟು ತಿಂದು ಒಗ್ಗಟ್ಟಾಗಿ ಇರೋಣ!

### ಪಕ್ಷೇತರರ ಜತೆ ಆರ್. ಅಶೋಕ್ ರಹಸ್ಯ ಸಭೆ | ಉಳಿಸಿಕೊಳ್ಳುವ ಹೊಣೆ ರಾಮಲಿಂಗಾರೆಡ್ಡಿ ಹೆಗಲಿಗೆ


# ಮೈತ್ರಿ ಭಂಗಕ್ಕೆ ಸಿದ್ಧವಾಯ್ತಾ ಬಿಜೆಪಿ?

ಉದಯಕಾಲ ನ್ಯೂಸ್

**ಬೆಂಗಳೂರು: ರಾಜ್ಯ ಸರಕಾರವನ್ನು ಪತನಗೊಳಿಸುವ ನಿಟ್ಟಿನಲ್ಲಿ ಸರ್ಕಸ್ ನಡೆಸುತ್ತಿರುವ ಬಿಜೆಪಿ ಆಸೆ ಬಿಬಿಎಂಪಿಯಲ್ಲೂ ಗರಿಗೆದರಿದ್ದು, ಪಕ್ಷೇತರರ ಸಹಕಾರದಿಂದ ಮೈತ್ರಿ ಆಡಳಿತಕ್ಕೆ ತಿಲಾಂಜಲಿ ಬಿಡಲು ಬಿಜೆಪಿ ಸಿದ್ಧತೆ ನಡೆಸುತ್ತಿದೆ ಎನ್ನಲಾಗುತ್ತಿದೆ.**

ಬಿಬಿಎಂಪಿಯಲ್ಲಿ ಕಾಂಗ್ರೆಸ್–ಜೆಡಿಎಸ್ ನಡುವಿನ ಮೈತ್ರಿಯ ಆಡಳಿತ ಅಸ್ತಿತ್ವಕ್ಕೆ ಬರಲು ಪ್ರಮುಖ ಕಾರಣರಾಗಿದ್ದ ಪಕ್ಷೇತರ ಸದಸ್ಯರನ್ನು ಸೆಳೆಯಲು ಬಿಜೆಪಿ ಕಸರತ್ತು ನಡೆಸುತ್ತಿದೆ. ಈ ನಿಟ್ಟಿನಲ್ಲಿ ಮಾಜಿ ಉಪಮುಖ್ಯಮಂತ್ರಿ ಹಾಗೂ ಬಿಜೆಪಿ ನಾಯಕ ಆರ್. ಅಶೋಕ್ ಅವರ ನೇತೃತ್ವದಲ್ಲಿ ಪಕ್ಷೇತರ ಸದಸ್ಯರ ಮನವೊಲಿಕೆ ಕಾರ್ಯ ಸಾಂಗವಾಗಿ ನಡೆಯುತ್ತಿದೆ. ಪಕ್ಷೇತರರಿಗೆ ಅಧಿಕಾರದ ಆಸೆ ತೋರಿಸಿ ಮೈತ್ರಿ ಆಡಳಿತಕ್ಕೆ ಸಂಚಕಾರ ತರುವ ನಿಟ್ಟಿನಲ್ಲಿ ಆರ್. ಅಶೋಕ್ ಮತ್ತವರ ತಂಡ ಕಾರ್ಯಪ್ರವೃತ್ತವಾಗಿದೆ ಎಂಬ ಮಾಹಿತಿ ಮೂಲಗಳಿಂದ ಬಹಿರಂಗವಾಗಿದೆ.

2015ರಲ್ಲಿ 100 ಸ್ಥಾನ ಗೆದ್ದಿದ್ದ ಬಿಜೆಪಿ ಅಧಿಕಾರ ಹಿಡಿಯುವ ಅತಿಯಾದ ಆತ್ಮವಿಶ್ವಾಸದಲ್ಲಿ ಬಿಜೆಪಿ ಕಚೇರಿ ಬಾಗಿಲಿಗೆ ಬಂದಿದ್ದ ಪಕ್ಷೇತರ ಸದಸ್ಯರನ್ನು ಕಡೆಗಣಿಸಿತ್ತು. ಇದಕ್ಕೆ ತಕ್ಕದಾಗಿ ಬುದ್ಧಿ ಕಲಿಸಿದ ಪಕ್ಷೇತರ ಸದಸ್ಯರು ಕಾಂಗ್ರೆಸ್ ಜತೆ ಸೇರಿ ಕೇರಳದ ರೆಸಾರ್ಟ್‌ನಲ್ಲಿ ಬೀಡುಬಿಟ್ಟರು. ನಂತರ ಜೆಡಿಎಸ್ –ಕಾಂಗ್ರೆಸ್‌ನ ಶಾಸಕರು, ಪರಿಷತ್ ಸದಸ್ಯರ ಬೆಂಬಲದಿಂದ ಬಿಬಿಎಂಪಿಯಲ್ಲಿ ಅಧಿಕಾರದ ಗದ್ದುಗೆ ಏರಿ ಆಡಳಿತಾರೂಢ ಕಾಂಗ್ರೆಸ್ ಬೀಗಿತ್ತು. ಬಾಗಿಲಿಗೆ ಬಂದವರನ್ನು ಕಡೆಗಣಿಸಿದ ತಪ್ಪಿಗೆ ಆರ್. ಅಶೋಕ್ ಮತ್ತವರ ತಂಡ ಪೆಚ್ಚುಮೋರೆ ಹಾಕಿಕೊಂಡು ಕೌನ್ಸಿಲ್ ಸಭೆಯಲ್ಲಿ ಕೂರುವಂತಾಗಿತ್ತು.



### ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಪಕ್ಷೇತರರ ಸಭೆ

**ಬೆಂಗಳೂರು ರಾಜಕೀಯದಲ್ಲಿ ಎಲ್ಲರ ಜತೆಯಲ್ಲಿಯೂ ಸಮಾನ ಅಂತರ ಕಾಯ್ದುಕೊಂಡು ಮೂರು ಪಕ್ಷದ ಶಾಸಕರು ಮತ್ತು ಬಿಬಿಎಂಪಿ ಸದಸ್ಯರಿಗೂ ಮಂಚಿವಾಳು ಎನಿಸಿರುವ ರಾಮಲಿಂಗಾ ರೆಡ್ಡಿ ಅವರಿಗೆ ಪಕ್ಷೇತರ ಸದಸ್ಯರನ್ನು ಕಾಂಗ್ರೆಸ್ ಪರವಾಗಿಯೇ ಉಳಿಸಿಕೊಳ್ಳುವ ಹೊಣೆಯನ್ನು ನೀಡಲಾಗಿದೆ. ಹೀಗಾಗಿ, ರಾಮಲಿಂಗಾ ರೆಡ್ಡಿ ನೇತೃತ್ವದಲ್ಲಿ ಏಳು ಜನ ಪಕ್ಷೇತರರು ಸಭೆ ನಡೆಸಿದ್ದು, ತಮ್ಮ ಬೇಡಿಕೆಗಳನ್ನು ಮಂಡಿಸಿದ್ದಾರೆ ಎನ್ನಲಾಗಿದೆ. ಖಾಸಗಿ ಹೋಟೆಲ್‌ವೊಂದರಲ್ಲಿ ನಡೆದ ಸಭೆಯಲ್ಲಿ ಮುಂದಿನ ಮೇಯರ್ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿಯನ್ನು ಬೆಂಬಲಿಸುವಂತೆ ರಾಮಲಿಂಗಾ ರೆಡ್ಡಿ ಮನವಿ ಮಾಡಿದ್ದಾರೆ. ಇದಕ್ಕೆ ಸಮ್ಮತಿ ಸೂಚಿಸಿರುವ ಪಕ್ಷೇತರರು, ಬೆಂಬಲ ನೀಡಿದ್ದಕ್ಕೆ ಪ್ರತಿಫಲವಾಗಿ ತಮಗೆ ಅಧಿಕಾರ ಮತ್ತು ಅನುದಾನ ಸಿಗುವಂತೆ ನೋಡಿಕೊಳ್ಳುವ ಭರವಸೆ ನೀಡುವಂತೆ ಕೇಳಿಕೊಂಡಿದ್ದಾರೆ. ಇದಕ್ಕೆ ಒಪ್ಪಿರುವ ರಾಮಲಿಂಗಾ ರೆಡ್ಡಿ, ಪಕ್ಷೇತರರ ಎಲ್ಲ ಬೇಡಿಕೆಗಳನ್ನು ಪಕ್ಷದ ವರಿಷ್ಠರ ಜತೆ ಚರ್ಚಿಸಿ ಈಡೇರಿಸುವುದಾಗಿ ತಿಳಿಸಿದ್ದಾರೆ.**

2018ರ ವಿಧಾನಸಭೆ ಚುನಾವಣೆಯಲ್ಲಿ 104 ಸ್ಥಾನ ಪಡೆದರೂ ಅಧಿಕಾರದ ಗದ್ದುಗೆ ಉಳಿಸಿಕೊಳ್ಳು ವಿಫಲವಾದ ಬಿಜೆಪಿ ನಾಯಕರು ಇದೀಗ ರಾಜ್ಯ ಸರಕಾರ ಪತನಗೊಳಿಸುವ ನಿಟ್ಟಿನಲ್ಲಿ ಬಲೆ ಹೆಣೆಯುತ್ತಿದ್ದಾರೆ, ಇದೇ ಸಂದರ್ಭದಲ್ಲಿ ಅತಿಹೆಚ್ಚು ಸ್ಥಾನ ಗಳಿಸಿದ್ದರೂ ಅಧಿಕಾರದಿಂದ ದೂರ ಉಳಿದಿರುವ ಬಿಬಿಂಪಿಯಲ್ಲಿಯೂ ಅಧಿಕಾರ ಪಡೆಯಬೇಕು ಎಂಬ ಹಠಕ್ಕೆ ಬಿದ್ದಿರುವ ಬಿಜೆಪಿ ನಾಯಕರು ಇದೀಗ ಕಾರ್ಯಾಚರಣೆ ಶುರು ಮಾಡಿದ್ದಾರೆ. ಆದರೆ, ಕಳೆದ ಮೂರು ವರ್ಷದ ಅವಧಿಯಲ್ಲಿ ಸಫಲವಾಗದ ಬಿಜೆಪಿ ನಾಯಕರ ರಣತಂತ್ರ ನಾಲ್ಕನೇ ಮೇಯರ್ ಆಯ್ಕೆ ಅವಧಿಯಲ್ಲಿ ಯಾವ ರೀತಿ ಕೆಲಸ ಮಾಡಲಿದೆ ಎಂಬುದನ್ನು ಕಾದುನೋಡಬೇಕಿದೆ.

ಏಳು ಪಕ್ಷೇತರ ಸದಸ್ಯರಲ್ಲಿ ಹೊಯ್ಸಳ ನಗರ ವಾರ್ಡ್‌ನ ಆನಂದ್ ಕುಮಾರ್ ಮತ್ತು ಕೆ.ಪಿ ಅಗ್ರಹಾರ ವಾರ್ಡ್‌ನ ಗಾಯತ್ರಿ, ಸಗಾಯ್ ಪುರ ವಾರ್ಡ್‌ನ ಏಳುಮಲೈ ಕಾಂಗ್ರೆಸ್ ಟಿಕೆಟ್ ವಂಚಿತರಾಗಿ ಪಕ್ಷೇತರವಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ಇನ್ನುಳಿದಂತೆ ಕೋನೇನ ಅಗ್ರಹಾರ ವಾರ್ಡ್‌ನ ಚಂದ್ರಪ್ಪ ರೆಡ್ಡಿ, ದೊಮ್ಮಲೂರಿನ ಲಕ್ಷ್ಮಿ ನಾರಾಯಣ, ಮಾರತ್‌ಹಳ್ಳಿ ವಾರ್ಡ್‌ನ ರಮೇಶ್ ಮತ್ತು ಹಲಸೂರು ವಾರ್ಡ್‌ನ ಮಮತಾ ಶರವಣ ಬಿಜೆಪಿ ಟಿಕೆಟ್ ವಂಚಿತರಾಗಿ ಪಕ್ಷೇತರವಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ಗೆಲುವಿನ ನಂತರ ಬಿಜೆಪಿ ಪಕ್ಷದ ಕಚೇರಿಗೆ ಹೋಗಿ ಪಕ್ಷ ಸೇರ್ಪಡೆ ಪ್ರಸ್ತಾಪ ಮಾಡಿದ್ದರು. ಆದರೆ, ಆರ್.ಅಶೋಕ್ ಮತ್ತು ಅರವಿಂದ ಲಿಂಬಾವಳಿ ನೇತೃತ್ವದ ಬಿಜೆಪಿ ನಾಯಕರು ಪಕ್ಷೇತರರ ಸೇರ್ಪಡೆಗೆ ಒಪ್ಪದೆ, ಇವರನ್ನು ಹೊರಹಾಕಿದ್ದರು. ಈ ಏಳು ಜನರ ಜತೆಗೆ ಸಿದ್ಧಾಪುರ ವಾರ್ಡ್‌ನ ಎಸ್‌ಡಿಪಿಐ ಸದಸ್ಯ ಮುಜಾಹಿದ್ ಪಾಷಾ ಸೇರಿ ಎಲ್ಲರೂ ಕಾಂಗ್ರೆಸ್ ತೆಕ್ಕೆಗೆ ಸೇರಿದ್ದರು. ಇದು ಬಿಜೆಪಿಯನ್ನು ಅಧಿಕಾರವಂಚಿತರನ್ನಾಗಿ ಮಾಡಿತ್ತು.

### ದಿನೇಶ್ ಗುಂಡೂರಾವ್ ಭೇಟಿ

**ಖಾಸಗಿ ಹೋಟೆಲ್‌ನಲ್ಲಿ ರಾಮಲಿಂಗಾ ರೆಡ್ಡಿ ಅವರ ಜತೆ ನಡೆದ ಚರ್ಚೆ ವೇಳೆ ಕೆಪಿಸಿಸಿ ಅಧ್ಯಕ್ಷ ದಿನೇಶ್ ಗುಂಡೂರಾವ್ ಭೇಟಿ ನೀಡಿ ಪಕ್ಷೇತರ ಸದಸ್ಯರನ್ನು ಭೇಟಿ ಮಾಡಿದ್ದಾರೆ. ಮುಂದಿನ ಮೇಯರ್ ಆಯ್ಕೆ ವೇಳೆ ಪಕ್ಷದ ಮೇಯರ್ ಅಭ್ಯರ್ಥಿಯನ್ನು ಬೆಂಬಲಿಸುವಂತೆ ಇದೇ ಸಂದರ್ಭದಲ್ಲಿ ಮನವಿ ಮಾಡಿದ್ದಾರೆ ಎನ್ನಲಾಗಿದೆ. ಬಿಬಿಎಂಪಿಯಲ್ಲಿ ಕಳೆದ ಮೂರು ವರ್ಷದಿಂದ ಮೈತ್ರಿ ಆಡಳಿತದಲ್ಲಿ ಉತ್ತಮ ಕಾರ್ಯಗಳಾಗುತ್ತಿವೆ. ಆಡಳಿತ ಸುಧಾರಣೆಗೆ ಸಾಕಷ್ಟು ನೀತಿ ರೂಪಿಸಲಾಗಿದೆ. ಬಿಜೆಪಿ ಅಧಿಕಾರವಧಿಯಲ್ಲಿ ಅಡವಿಟ್ಟಿದ್ದ ಅನೇಕ ಕಟ್ಟಡಗಳನ್ನು ಬಿಡಿಸಿಕೊಳ್ಳಲಾಗಿದೆ. ನಗರದ ಅಭಿವೃದ್ಧಿಗೆ ಮೈತ್ರಿ ಆಡಳಿತದಲ್ಲಿ ಅನೇಕ ಹೊಸ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಹೀಗಾಗಿ, ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿರುವ ಮೈತ್ರಿ ಆಡಳಿತಕ್ಕೇ ನೀವು ಮತ್ತೊಮ್ಮೆ ಬೆಂಬಲ ಸೂಚಿಸಬೇಕು ಎಂದು ದಿನೇಶ್ ಗುಂಡೂರಾವ್ ಪಕ್ಷೇತರರಿಗೆ ಮನವಿ ಮಾಡಿದ್ದಾರೆ ಎನ್ನಲಾಗಿದೆ. ಇದಕ್ಕೆ ಪಕ್ಷೇತರರ ಸಮ್ಮತಿಯೂ ಸಿಕ್ಕಿದೆ ಎಂದು ಮೂಲಗಳು ತಿಳಿಸಿವೆ.**

# ಸರ್ಕಾರದ ಸವಲತ್ತು ಬಗ್ಗೆ ಮಾಹಿತಿ ನೀಡಿ: ಎಂ.ನಾರಾಯಣಸ್ವಾಮಿ

ಉದಯಕಾಲ ನ್ಯೂಸ್

**ಬ್ಯಾಟರಾಯನಪುರ : ಸರ್ಕಾರವು ನಾಗಿಕರಿಗಾಗಿ ಕೊಡ ಮಾಡಿರುವ ಯೋಜನೆಗಳು ಹಾಗೂ ಸವಲತ್ತುಗಳ ಬಗ್ಗೆ ಅಧಿಕಾರಿಗಳು ಸೂಕ್ತ ಮಾಹಿತಿ, ಮಾರ್ಗದರ್ಶನ ನೀಡುವ ಮೂಲಕ ನಾಗರಿಕರಿಗೆ ಸಹಕರಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಎಂ.ನಾರಾಯಣಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.**





ಬಾಗಲೂರು ಗ್ರಾಮ ಪಂಚಾಯ್ತಿ ವತಿಯಿಂದ ಗಣೇಶ ದೇವಾಲಯದ ಆವರಣದಲ್ಲಿ ಆಯೋಜಿಸಿದ್ದ 2018–19ನೇ ಸಾಲಿನ ಮೊದಲ ಸುತ್ತಿನ ಗ್ರಾಮಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿ, ಸರ್ಕಾರದ ಯಾವುದೇ ಯೋಜನೆ ಅಥವಾ ಸವಲತ್ತು ಜನರಿಗೆ ಸರಿಯಾಗಿ ತಲುಪುವಲ್ಲಿ ಅಧಿಕಾರಿಗಳ ಪಾತ್ರ ಮಹತ್ವಪೂರ್ಣವಾದುದು. ಅಧಿಕಾರಿಗಳು ಆಯಾ ಯೋಜನೆಯ ಬಗ್ಗೆ ಜನರಿಗೆ ಸರಿಯಾದ ಮಾಹಿತಿ, ಅದನ್ನು ಪಡೆಯಲು ಅನುಸರಿಸಬೇಕಾದ ವಿಧಾನ ಕುರಿತಂತೆ ನಾಗರಿಕರಿಗೆ ಸೂಕ್ತ ರೀತಿಯ ಸಲಹೆ–ಮಾರ್ಗದರ್ಶನ ನೀಡಿದರೆ ಜನತೆ ಅಂತಹ ಯೋಜನೆ ಅಥವಾ ಸವಲತ್ತನ್ನು ತಾವೇ ಪಡೆದುಕೊಳ್ಳುತ್ತಾರೆ. ಆದರೆ ಕೆಲ ಅಧಿಕಾರಿಗಳ ಬೇಜವಾಬ್ದಾರಿತನ, ನಿರುತ್ಸಾಹದಂತಹ ವಿಲೋಮ ಗುಣಗಳಿಂದಾಗಿ ಸರ್ಕಾರದ ಹಲವು ಯೋಜನೆಗಳು ವೈಫಲ್ಯವಾಗುತ್ತಿರುವುದು ವಿಷಾದಕರ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಕಳೆದ ಒಂದು ವರ್ಷದ ಅವಧಿಯಲ್ಲಿ ರಾಜ್ಯ ಸರ್ಕಾರ ಜನಕಲ್ಯಾಣಕ್ಕಾಗಿ ಸುಮಾರು 2.18 ಲಕ್ಷ ಕೋಟಿ ರೂ.ಅಂದಾಜು ವೆಚ್ಚದ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದೆ ಆದರೆ ಅಧಿಕಾರಿಗಳು ಅಂತಹ ಯೋಜನೆಗಳ ಬಗ್ಗೆ ಜನತೆಗೆ ತಿಳಿಸಿಕೊಡುವ ಮೂಲಕ ಯೋಜನೆಗಳ ಯಶಸ್ಸಿಗೆ ಕೊಡುಗೆ ನೀಡಬೇಕು.

ಸರ್ಕಾರ ವಸತಿ ರಹಿತರಿಗಾಗಿ ಮನೆ ನಿರ್ಮಿಸಿ ಕೊಡುವುದು, ನಿವೇಶನ ರಹಿತರಿಗೆ ನಿವೇಶನಗಳನ್ನು ನೀಡುವುದು, ಉಚಿತ ಶೌಚಾಲಯಗಳನ್ನು ಕಟ್ಟಿಸಿಕೊಡುವುದು, ರೈತರ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳು, ಮಹಿಳೆಯರ ಸ್ವಾವಲಂಬಿ ಬದುಕಿಗಾಗಿ ಸಬ್ಸಿಡಿ ಸಾಲ ಯೋಜನೆ, ಗುಡಿ ಕೈಗಾರಿಕೆಗಳಿಗೆ ನೆರವು ಮುಂತಾದ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ, ಸರ್ಕಾರದ ಈ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಬಾಗಲೂರು ಗ್ರಾ.ಪಂ.ಅಧ್ಯಕ್ಷ ಜೆ.ಮುನೇಗೌಡ ಮಾತನಾಡಿ ಸ್ವಚ್ಛತೆ, ಕುಡಿಯುವ ನೀರು, ಒಳಚರಂಡಿ, ಕಸವಿಲೇವಾರಿಯಂತಹ ವಿವಿಧ ಸೌಕರ್ಯಗಳನ್ನು ಜನತೆಗೆ ದೊರಕಿಸಿಕೊಡಲು ಗ್ರಾಮ ಪಂಚಾಯ್ತಿ ಶ್ರಮಿಸಲೇಬೇಕು, ಅದು ಪಂಚಾಯ್ತಿಯ ಆದ್ಯಕರ್ತವ್ಯವಾಗಿದೆ. ಆದರೆ ಇಷ್ಟೆಲ್ಲಾ ಸೌಕರ್ಯಗಳನ್ನು ಬಯಸುವ ನಾಗರಿಕರು ಗ್ರಾಮ ಪಂಚಾಯ್ತಿಯ ಆದಾಯದ ಗಳಿಕೆಯ ಬಗ್ಗೆಯೂ ಸಹ ಅರಿತುಕೊಂಡು ತೆರಿಗೆ ಪಾವತಿಯನ್ನು ಪ್ರಾಮಾಣಿಕವಾಗಿ ಮಾಡಬೇಕು. ಇದರಿಂದ ಪಂಚಾಯ್ತಿ ಪ್ರಗತಿ ಪಥದಲ್ಲಿ ಸಾಗಲು ಸಹಕಾರಿಯಾಗುತ್ತದೆ. ಕೇವಲ ತೆರಿಗೆ ಪಾವತಿಯ ಹಣದಿಂದಲೇ ಗ್ರಾಮ ಪಂಚಾಯ್ತಿಯ ಸರ್ವಾಂಗೀಣ ಪ್ರಗತಿ ಸಾಧ್ಯವಾಗುವುದಿಲ್ಲ, ಸರ್ಕಾರದ ಅನುದಾನದ ಅವಶ್ಯಕತೆ ಸಹ ಇರುತ್ತದೆ. ಈ ನಿಟ್ಟಿನಲ್ಲಿ ಸರ್ಕಾರದಿಂದ ಅನುದಾನ ಪಡೆಯಲು ನಾವು ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಮಹಿಳಾ ಸ್ವಸಹಾಯ ಗುಂಪುಗಳಿಗೆ ಸಹಾಯಧನದ ಚೆಕ್ ವಿತರಣೆ, ಅಂಗವಿಕಲರಿಗೆ ಗಾಲಿ ಕುರ್ಚಿ, ಹೊಲಿಗೆ ತರಬೇತಿ ಪಡೆದ ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ ಸೇರಿದಂತೆ ಸರ್ಕಾರ ವಿವಿಧ ಸವಲತ್ತುಗಳನ್ನು ಫಲಾನುಭವಿಗಳಿಗೆ ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಾಗಲೂರು ಗ್ರಾಮ ಪಂಚಾಯ್ತಿ ಅಧ್ಯಕ್ಷ ಜೆ.ಮುನೇಗೌಡ ವಹಿಸಿದ್ದು, ಕಾರ್ಯಕ್ರಮದಲ್ಲಿ ತಾಲ್ಲೂಕು ಪಂಚಾಯ್ತಿ ಸದಸ್ಯರಾದ ಎಂ.ನಾಗರಾಜ್, ಸಭಾ ಅಂಜುಮ್, ತಾಲ್ಲೂಕು ಪಂಚಾಯ್ತಿ ಕಾರ್ಯ ನಿರ್ವಹಣಾಧಿಕಾರಿ ಅಶ್ವತ್ಥ್‌ರೆಡ್ಡಿ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಎಸ್. ರಮೇಶ್, ಕಾರ್ಯದರ್ಶಿ ಜಿ.ಜ್ಯೋತಿ ಸೇರಿದಂತೆ ಗ್ರಾಮ ಪಂಚಾಯ್ತಿ ಸದಸ್ಯರು ಹಾಗೂ ಸಿಬ್ಬಂದಿಗಳಿದ್ದರು.





ಬಿಇಎಂಎಲ್ ನಿರ್ಮಿಸಿರುವ ಸ್ವದೇಶಿ 205ಟಿ ಎಲೆಕ್ಟ್ರಿಕ್ ಡಂಪ್ ಟ್ರಕ್‌ನ್ನು ಸೋಮವಾರ ಮೈಸೂರಿನಲ್ಲಿ ಬಿಡುಗಡೆಗೊಳಿಸಲಾಯಿತು. ಬಿಇಎಂಎಲ್ ಮುಖ್ಯವ್ಯವಸ್ಥಾಪಕ ನಿರ್ದೇಶಕ ದೀಪಕ್ ಕುಮಾರ್ ಹೂಟಾ, ಪಿಕೆ ಸಿನ್ಹಾ ಇದ್ದರು.



ಪೀಣ್ಯ ದಾಸರಹಳ್ಳಿ ಕ್ಷೇತ್ರದ ಉತ್ತರ ಕರ್ನಾಟಕ ಜನಪರ ವೇದಿಕೆ ವತಿಯಿಂದ ಕೊಡಗಿನಲ್ಲಿ ಮಳೆ ಸಂತ್ರಸ್ತರ ನೆರವಿಗಾಗಿ ಮುಖ್ಯಮಂತ್ರಿ ಪರಿಹಾರ ನಿಧಿಗೆ 50ಸಾವಿರ ರೂ. ಚೆಕ್ ಅನ್ನು ಶಾಸಕ ಆರ್. ಮಂಜುನಾಥ ಅವರಿಗೆ ಹಸ್ತಾಂತರಿಸಲಾಯಿತು. ಸಂಘದ ಅಧ್ಯಕ್ಷ ಎಂ.ಜಿ. ಮಠ, ಕಾರ್ಯಾಧ್ಯಕ್ಷ ಪಿ.ಜಿ. ಪಾಟೀಲ್ ಎನ್.ಬಿ. ಪಡೇಕನೂರು, ಆಶೋಕ ನಂದಗಾಂ, ಹಣಮಂತಪ್ಪ ಕಡತಾದ, ಮೇಘರಾಜ ಹಾಗೂ ಸಂಘದ ಸದಸ್ಯರು ಇದ್ದರು.

# 62ನೇ ವಾರ್ಷಿಕೋತ್ಸವಕ್ಕೆ ಜೀವನ್ ಶಾಂತಿ ಬಂಪರ್ ಕೊಡುಗೆ

### ಇಂದಿನಿಂದ ನೂತನ ಪಿಂಚಣಿ ಪಾಲಿಸಿ ಮಾರಾಟ | ಕನಿಷ್ಠ 1.5 ಲಕ್ಷ ಹೂಡಿಕೆಯಲ್ಲಿ ಹೆಚ್ಚು ಸೌಲಭ್ಯ

ಉದಯಕಾಲ ನ್ಯೂಸ್

**ಬೆಂಗಳೂರು: ತನ್ನ 62ನೇ ವಾರ್ಷಿಕೋತ್ಸವದ ಅಂಗವಾಗಿ ಭಾರತೀಯ ಜೀವ ವಿಮಾ ಸಂಸ್ಥೆಯು ತನ್ನ ಗ್ರಾಹಕರಿಗೆ 'ಜೀವನ್ ಶಾಂತಿ' ಎಂಬ ನೂತನ ಪಿಂಚಣಿ ಪಾಲಿಸಿಯೊಂದನ್ನು ಪರಿಚಯಿಸುತ್ತಿದ್ದು, ಪಾಲಿಸಿದಾರರಿಗೆ ಹೆಚ್ಚಿನ ಸವಲತ್ತುಗಳನ್ನು ಒದಗಿಸಲಿದೆ.**

ಬೆಂಗಳೂರಿನ ವಿಭಾಗೀಯ ಕಚೇರಿಯಲ್ಲಿ ಮಂಗಳವಾರ ನಡೆದ ಸರಳ ಸಮಾರಂಭದಲ್ಲಿ 'ಜೀವನ್ ಶಾಂತಿ' ಪಾಲಿಸಿಯನ್ನು ಲೋಕಾರ್ಪಣೆಗೊಳಿಸಿದ ವಿಭಾಗೀಯ ವ್ಯವಸ್ಥಾಪಕ ನಿರ್ದೇಶಕ ಟಿ.ಸಿ ಸುಶೀಲ್ ಕುಮಾರ್, ಎಲ್‌ಐಸಿಯು ತನ್ನ 62ನೇ ವರ್ಷದ ಸಂದರ್ಭದಲ್ಲಿ ಗ್ರಾಹಕರಿಗೆ ಶುಭಸುದ್ದಿಯೊಂದನ್ನು ನೀಡುತ್ತಿದೆ. ಒಂದೇ ಕಂತಿನಲ್ಲಿ ಹೂಡಿಕೆ ಮಾಡುವ ಮೂಲಕ ಎರಡು ವಿಧದಲ್ಲಿ ಪಿಂಚಣಿ ಪಡೆಯುವ ವ್ಯವಸ್ಥೆಯನ್ನು ಒದಗಿಸಿದೆ. ಹೂಡಿಕೆ ಮಾಡಿದ ಮೊದಲ ವರ್ಷದಿಂದಲೇ ಪಿಂಚಣಿ ಪಡೆಯುವ ಹಾಗೂ ನಿಗಧಿ ಅವಧಿಗೆ ಹೂಡಿಕೆ ಮಾಡಿ ನಂತರದ ವರ್ಷಗಳಲ್ಲಿ ಪಿಂಚಣಿ ಪಡೆಯುವ ಅನುಕೂಲತೆ ಒದಗಿಸಲಾಗಿದೆ. ಇದರಲ್ಲಿ 1ರಿಂದ 20 ವರ್ಷದವರೆಗೆ ನಿಗದಿತ ಅವಧಿ ವಿಸ್ತರಣೆಗೆ ಅವಕಾಶ ನೀಡಲಾಗಿದೆ ಎಂದರು.





ಕನಿಷ್ಠ ಹೂಡಿಕೆ ಮೊತ್ತವನ್ನು 1.5 ಲಕ್ಷರು ನಿಗದಿ ಮಾಡಿದ್ದು, ಗರಿಷ್ಠ ಹೂಡಿಕೆಗೆ ಅವಕಾಶವಿದೆ. ಪಾಲಿಸಿದಾರರಿಗೆ 'ಜಾಯಿಂಟ್ ಲೈಫ್' ಮೂಲಕ ಮತ್ತೊಬ್ಬ ವ್ಯಕ್ತಿಯನ್ನು ಪಾಲಿಸಿದಾರರನ್ನಾಗಿ ಮಾಡುವ ಅವಕಾಶ ನೀಡಲಾಗಿದೆ. ಅಂಗವಿಕಲ ಮಕ್ಕಳ ಪೋಷಕರಿಗೆ ಕನಿಷ್ಠ ಮೊತ್ತದ ರಿಯಾಯಿತಿ ನೀಡಿದ್ದು, 50 ಸಾವಿರ ರು. ನಿಗದಿ ಮಾಡಲಾಗಿದೆ. ನಿಗದಿತ ಅವಧಿಗೆ ವಾರ್ಷಿಕ ನಿಶ್ಚಿತ ಮೊತ್ತವನ್ನು ಸಂಸ್ಥೆ ಸೇರ್ಪಡೆಗೊಳಿಸಲಿದೆ.

ಪಾಲಿಸಿದಾರರು ಸಾವನ್ನಪ್ಪಿದರೆ ಶೇ.110ರಷ್ಟು ಮೊತ್ತವನ್ನು ವಾಪಸ್ಸು ನೀಡಲಾಗುತ್ತದೆ. ಜತೆಗೆ, ಆವರೆಗೆ ಸಂಗ್ರಹವಾದ ನಿಶ್ಚಿತ ಮೊತ್ತ ಹಾಗೂ ಹೂಡಿಕೆ ಮೊತ್ತ ದೊಡ್ಡ ಪ್ರಮಾಣದಲ್ಲಿದ್ದರೆ, ನೀಡಿದ ಪಿಂಚಣಿ ಮೊತ್ತವನ್ನು ಕಳೆದು ಗ್ರಾಹಕರಿಗೆ ಉಳಿದ ಮೊತ್ತವನ್ನು ಪಾವತಿಸುವ ಅವಕಾಶವಿದೆ.

### ಇಂದಿನಿಂದ ಮಾರಾಟ ಆರಂಭ

**ಜೀವನ್ ಶಾಂತಿ ಪಾಲಿಸಿ ಮಂಗಳವಾರ ಅಧಿಕೃತವಾಗಿ ಲೋಕಾರ್ಪಣೆಗೊಂಡಿದ್ದು, ಇಂದಿನಿಂದ ಎಲ್ಲ ಜೀವನ್ ವಿಮಾ ಸಂಸ್ಥೆಯ ಶಾಖೆಗಳಲ್ಲಿ ಮಾರಾಟವಾಗಲಿವೆ ಎಂದು ಬೆಂಗಳೂರು ವಿಭಾಗೀಯ ಕಚೇರಿಯ ಮಾರ್ಕೆಟಿಂಗ್ ಮ್ಯಾನೇಜರ್ ಮುರುಳಿ ಮನೋಹರ್ ತಿಳಿಸಿದ್ದಾರೆ. ಉದಾಹರಣೆಗೆ 10 ಲಕ್ಷ ಹೂಡಿಕೆ ಮಾಡಿದ ಪಾಲಿಸಿದಾರರಿಗೆ ಪ್ರತಿ ವರ್ಷ 2 ಲಕ್ಷ ನಿಶ್ಚಿತ ಮೊತ್ತವನ್ನು ಎಲ್‌ಐಸಿ ನೀಡಲಿದೆ. 1ರಿಂದ 20 ವರ್ಷ ನಿಗದಿತ ಅವಧಿ ರೂಪಿಸಿದ್ದು, ನಂತರ 2.6 ಲಕ್ಷ ಪಿಂಚಣಿ ನೀಡಲಾಗುತ್ತದೆ. ಕನಿಷ್ಠ ವಯೋಮಿತಿಯನ್ನು 30 ವರ್ಷಕ್ಕೆ ನಿಗದಿಗೊಳಿಸಿದ್ದು, 80 ವರ್ಷದವರೆಗೆ ಹೂಡಿಕೆ ಮಾಡಬಹುದು. ಇದು ನಾನ್ ಮೆಡಿಕಲ್ ಪಾಲಿಸಿಯಾಗಿದ್ದು, ಅತ್ಯಧಿಕ ವಾಪಸಾತಿ ನೀಡುವ ಯೋಜನೆಯಾಗಿದೆ ಎಂದು ಅವರು ತಿಳಿಸಿದರು.**

**ಬೆಂಗಳೂರು ವಿಭಾಗ 1ರ ಹಿರಿಯ ವಿಭಾಗಾಧಿಕಾರಿ ಅಶೀಶ್ ಕುಮಾರ್ ಮಾತನಾಡಿ, ಪಾಲಿಸಿದಾರರು ತನ್ನ ಮಡದಿ, ಮಕ್ಕಳು ಮತ್ತು ಮೊಮ್ಮಕ್ಕಳನ್ನು ಜೋಡಿ ಪಿಂಚಣಿದಾರಾಗಿ ಸೇರ್ಪಡೆ ಮಾಡಬಹುದು. ಆದರೆ, ಅವರಿಗೂ 30 ವರ್ಷ ವಯಸ್ಸಾಗಿರಬೇಕು ಎಂಬ ನಿಯಮವಿದೆ. ಈ ವ್ಯವಸ್ಥೆಯಲ್ಲಿ ಹಿರಿಯ ವ್ಯಕ್ತಿಗೆ ಅನುಗುಣವಾಗಿಯೇ ಪಾಲಿಸಿಯ ಸೌಲಭ್ಯಗಳು ಅತಿ ಕಿರಿಯ ವ್ಯಕ್ತಿಗೂ ದೊರೆಯುತ್ತವೆ ಎಂದು ತಿಳಿಸಿದ್ದಾರೆ.**